# ಕರ್ನಾಟಕ ಸರ್ಕಾರದ ನಡವಳಿಗಳು
## (ಜಲಸಂಪನ್ಮೂಲ ಇಲಾಖೆ)

ವಿಷಯ:- ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನ ಕುಣ್ಣಟಗಿ ಗ್ರಾಮದ ಹತ್ತಿರ ಬಸಾಪುರ ನಾಲಾಕ್ಕೆ (ಪಗಡದಿನ್ನಿ ನಾಲಾ) ಪಿಕಪ್ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಹಾಗೂ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ:- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ: ಕನೀನಿ / ಮುನಿರಾಬಾದ್/ ಪಗಡದಿನ್ನಿ - ವಳಬಳ್ಳಾರಿ/ 2011-12 / 4111, ದಿ:12.12.2011.

ಪ್ರಸ್ತಾವನೆ:-

ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು ಕುಣ್ಣಟಗಿ ಗ್ರಾಮದಿಂದ ಸುಮಾರು 3 ಕಿ.ಮೀ ದೂರದಲ್ಲಿ ಹರಿಯುವ ಪಗಡದಿನ್ನಿ ನಾಲೆಗೆ (ಬಸಾಪೂರ ನಾಲೆ) ತುಂಗಭದ್ರಾ ಎಡದಂಡೆ ಕಾಲುವೆ ಉಪ ಕಾಲವೆ 54 ರ ಉಪ ನಾಲೆ 3 ಆರ್ ಕೊನೆಭಾಗದ ರೈತರ ಸುಮಾರು 550 ಎಕರೆ ಬಾದಿತ ಜಮೀನಿಗೆ ನೀರಿನ ಬವಣೆಯನ್ನು ತಪ್ಪಿಸುವ ಸಲುವಾಗಿ ಒಂದು ಪಿಕಪ್‌ಅನ್ನು ನಿರ್ಮಿಸಿ ಇದರ ನೀರನ್ನು ಬಳಸಿ ರೈತರಿಗೆ ಒದಗಿಸಬಹುದಾಗಿದೆ. ಉಪ ಕಾಲುವೆಯ ಬಸಿ ನೀರು ಹಾಗೂ ಹಳ್ಳದಲ್ಲಿನ ನೀರು ಬಸಾಪೂರ ನಾಲಾದಲ್ಲಿ ಸತತವಾಗಿ ಹರಿಯುತ್ತಿದ್ದು, ಈ ಹಳ್ಳಕ್ಕೆ ರೈತರು ತಾತ್ಕಾಲಿಕ ಒಡ್ಡುಗಳನ್ನು ಹಾಕಿ ನೀರನ್ನು ಬಳಸುತ್ತಿದ್ದಾರೆ. ಆದರೆ ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಾಗಿ ಈ ತಾತ್ಕಾಲಿಕ ತಡೆಗೋಡೆಗಳು ಒಡೆದು ಹೋಗುತ್ತದೆ. ಆದ್ದರಿಂದ ಶಾಶ್ವತ ಪರಿಹಾರಕ್ಕಾಗಿ ಒಂದು ಆರ್.ಸಿ.ಸಿ ವಿಯರ್‌ನ್ನು ನಿರ್ಮಿಸಿ, ಈ ತೊಂದರೆಯನ್ನು ನಿವಾರಿಸುವಂತೆ ಸ್ಥಳೀಯ ಶಾಸಕರು ಹಾಗೂ ಸಂಘ ಸಂಸ್ಥೆಗಳು ಒತ್ತಾಯ ಮಾಡುತ್ತಿರುತ್ತಾರೆ.

ಮೇಲೆ ಓದಲಾದ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು, ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್‌ರವರು ಸಲ್ಲಿಸಿರುವ ಸದರಿ ಕಾಮಗಾರಿಯ ರೂ.168.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸೂಕ್ತ ಅನುದಾನ ನೀಡಿ, ಲಭ್ಯತೆ ಅನುಸಾರ ಯೋಜನೆಗೆ ಬೇಕಾಗುವ ನೀರನ್ನು ಹಂಚಿಕೆ ಮಾಡಿ ನಿಗಮದಿಂದ ಕೈಗೊಳ್ಳುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

Put C/o file
2/1/5

ಮುಂದುವರೆದಿದೆ..2

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 103 ಎಂಟಿಪಿ 2009**
**ಬೆಂಗಳೂರು, ದಿನಾಂಕ: 11.05.2012,**

ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನ ಕುಣ್ಣಟಗಿ ಗ್ರಾಮದ ಹತ್ತಿರ ಬಸಾಪುರ ನಾಲಾಕ್ಕೆ (ಪಗಡದಿನ್ನಿ ನಾಲಾ) ಪಿಕಪ್ ನಿರ್ಮಾಣ ಕಾಮಗಾರಿಯ ರೂ.168.00 ಲಕ್ಷಗಳ (ಒಂದು ನೂರ ಅರವತ್ತೆಂಟು ಲಕ್ಷಗಳು) ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯುಡಿ 671 ಎಫ್ ಸಿ 2009, ದಿ:03.02.2010 ರ ಅನ್ವಯ ಮುಖ್ಯ ಇಂಜಿನಿಯರ್, ನೀ.ಕೇ.ವ., ಮುನಿರಾಬಾದ್‌ರವರ ಮಟ್ಟದಲ್ಲಿಯೇ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಿ, ನಿಗಮಕ್ಕೆ ಒದಗಿಸಿರುವ ಒಟ್ಟಾರೆ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ. ಶ್ರೀನಿವಾಸುಲು)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2) ಹೊಸಕಟ್ಟಡ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ(ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.